# ಕಾಸ್ಮೆಟಿಕ್ ಗೈನೆಕಾಲಜಿ

## ಸ್ತ್ರೀ ಸೌಂದರ್ಯದ ಮರುಪೂರಣ



**ಹೆರಿಗೆಯ ಬಳಿಕ ದೇಹ ನೈಸರ್ಗಿಕವಾಗಿ ಸಹಜ ಸ್ಥಿತಿಗೆ ಬರದೇ ಇರುವ, ಜನನಾಂಗದ ಸುತ್ತ ಹಾನಿಯಾಗಿರುವ ಭಾಗವನ್ನು ಪುನರುಜ್ಜೀವಗೊಳಿಸುವ ವಿನೂತನ ಚಿಕಿತ್ಸೆ 'ಕಾಸ್ಮೆಟಿಕ್ ಗೈನೆಕಾಲಜಿ' ಹೆಸರಿನಲ್ಲಿ ಜನಪ್ರಿಯವಾಗುತ್ತಿದೆ.**

**ಉಮಾ ಅನಂತ್**

ತಡವಾಗಿ ಮದುವೆಯಾದ ಮಹಿಳೆಯರು ಎರಡನೆ ಹೆರಿಗೆಯಾದ ಬಳಿಕ ನಲ್ವತ್ತರ ಹರೆಯದ ಆಸುಪಾಸಿಗೆ ಬಂದು ನಿಲ್ಲುವುದು ಸಹಜ. ಈ ಹೊತ್ತಿಗೆ ಹೆಣ್ಣಿನ ದೇಹ ಉಬ್ಬುವುದು ಮಾತ್ರವಲ್ಲ, ಜನನಾಂಗಗಳ ಕಾರ್ಯನಿರ್ವಹಣೆ ನಿಯಮಿತ ಹದ ತಪ್ಪುತ್ತದೆ. ಮಹಿಳೆಯರ ದೈಹಿಕ, ಕ್ರಿಯಾತ್ಮಕ ಹಾಗೂ ಲೈಂಗಿಕ ಅಂಶಗಳಲ್ಲಿ ಕೊಂಚ ತೊಡಕುಗಳೂ ಉಂಟಾಗುತ್ತವೆ. ಇಂತಹ ಮಹಿಳೆಯರಿಗೆ ಸಹಾಯಕ್ಕೆ ಬರುವುದೇ 'ಕಾಸ್ಮೆಟಿಕ್ ಗೈನೆಕಾಲಜಿ'. ಇದು ಆರೋಗ್ಯ, ಸೌಂದರ್ಯ ಎರಡನ್ನೂ ಕಾಪಾಡುವುದಲ್ಲದೆ, ದೈಹಿಕ ಸೌಂದರ್ಯದ ಮರುಪೂರಣದ ಪ್ರಕ್ರಿಯೆಯೂ ಆಗಿದೆ.

ಕಾಯಿಲೆ ಇಲ್ಲದಿದ್ದರೂ ಸೌಂದರ್ಯಕ್ಕಾಗಿ ಮಾಡುವ ಚಿಕಿತ್ಸೆಯಿದು. ಹೆರಿಗೆಯಾದ ಬಳಿಕ ಕಿಬ್ಬೊಟ್ಟೆಯ ಕೆಳಗೆ, ಜನನಾಂಗದ ಮೇಲ್ಭಾಗದ ಸುತ್ತ ಹಾನಿಯಾಗಿರುವ ಭಾಗವನ್ನು ಪುನರುಜ್ಜೀವಗೊಳಿಸುವ ಚಿಕಿತ್ಸೆ. ಸೌಂದರ್ಯ ಪ್ರಜ್ಞೆ ಹೆಚ್ಚಿರುವ ಮಹಿಳೆಯರಿಗೆ ಈ ವಿನೂತನ ಚಿಕಿತ್ಸೆ ಒಂದು ವರದಾನ.

ಬೆಂಗಳೂರಿನ ಅಂಜಲಿಗೆ ವಯಸ್ಸು 38. ಎರಡನೆ ಹೆರಿಗೆಯ ಬಳಿಕ ದೇಹದ ಆಕಾರದಲ್ಲಿ ವಿಪರೀತ ಬದಲಾವಣೆಯಾಗಿತ್ತು. ಉಬ್ಬು ಹೊಟ್ಟೆ ಒಳಗೆ ಹೋಗದೆ ಮತ್ತೆ ಗರ್ಭಿಣಿಯೇ ಎಂದು ಜನ ಕೇಳುವಂತಾಗಿತ್ತು. ಈಕೆಯ ಯೋನಿಯ ಭಾಗವು ಬಹಳ ಸಡಿಲಗೊಂಡಿದ್ದು, ಇದಕ್ಕೆ ಸೂಕ್ತ ಚಿಕಿತ್ಸೆ ವಿದೇಶದಲ್ಲಿ ಲಭ್ಯ ಎಂಬುದು ಅಂಜಲಿಗೆ ತಿಳಿದಿತ್ತು. ಆದರೆ ಬೆಂಗಳೂರು, ಹೈದರಾಬಾದ್‌ಗಳಲ್ಲೂ ಇದಕ್ಕೆ 'ಕಾಸ್ಮೆಟಿಕ್' ಚಿಕಿತ್ಸೆ ಇದೆ ಎಂಬುದು ಮೊದಲಿಗೆ ಗೊತ್ತಿರಲಿಲ್ಲ. ಸ್ನೇಹಿತೆಯರ ಮೂಲಕ ಬೆಂಗಳೂರಿನಲ್ಲೂ ಈ ಚಿಕಿತ್ಸೆ ಲಭ್ಯ ಎಂದು ತಿಳಿದುಕೊಂಡ ಅಂಜಲಿ, ಚಿಕಿತ್ಸೆ ಪಡೆದರು. ಈಗ ದೈಹಿಕ, ಮಾನಸಿಕ ವೇದನೆಯಿಂದ ದೂರವಾಗಿ ಸಹಜ ಬದುಕಿಗೆ ಹೊಂದಿಕೊಂಡಿದ್ದಾರೆ.

ಕಾಸ್ಮೆಟಿಕ್ ಸ್ತ್ರೀರೋಗಶಾಸ್ತ್ರವು ಮಹಿಳೆಯರಿಗೆ ದೈಹಿಕ, ಕ್ರಿಯಾತ್ಮಕ ಮತ್ತು ಲೈಂಗಿಕವಾಗಿ ಉಂಟಾಗುವ ಯಾತನೆ ಹಾಗೂ ಕೀಳರಿಮೆಗಳನ್ನು ದೂರ ಮಾಡುತ್ತದೆ. ಸಹಜ ಹೆರಿಗೆಯಲ್ಲಿ ಬಹಳ ತ್ರಾಸ ಅನುಭವಿಸಿದ ಮಹಿಳೆಯರು, ಕಷ್ಟಕರವಾದ ಹೆರಿಗೆಯನ್ನು ಮಾಡಿಕೊಂಡಿರುವ ಮಹಿಳೆಯರು ಯೋನಿಯಲ್ಲಿ ಆಗುವ ನೋವನ್ನು ಸಹಿಸಲಾಗದೆ ಬಳಲುತ್ತಿದ್ದಾರೆ, ಈ ಭಾಗದಲ್ಲಿ ಆಗಿರುವ ಗಾಯ



ಡಾ. ವಿದ್ಯಾ ಭಟ್

ಸರಿಯಾಗಿ ಮಾಯದೇ ಇರಬಹುದು. ಇದರಿಂದ ಮುಂದೆ ಸಂಭೋಗದ ಸಮಯದಲ್ಲಿ ಅಸ್ವಸ್ಥತೆ ಉಂಟಾಗಬಹುದು, ಕೆಮ್ಮುವಾಗ, ಸೀನುವಾಗ ಅಥವಾ ಜೋರಾಗಿ ನಗುವಾಗ ಮೂತ್ರ ಹಿಡಿದಿಟ್ಟುಕೊಳ್ಳಲು ಸಾಧ್ಯವಾಗದೇ ಇರಬಹುದು. ಈ ಎಲ್ಲ ತೊಂದರೆಗಳನ್ನು 'ಕಾಸ್ಮೆಟಿಕ್ ಗೈನೆಕಾಲಜಿ' ನಿವಾರಿಸುತ್ತದೆ.

ಕಾಸ್ಮೆಟಿಕ್ ಗೈನೆಕಾಲಜಿಯಿಂದ